ಎತ್ತಿನ ಹೊಳೆಯಿಂದ ನೀರು ಸರಬರಾಜು ಮಾಡುವುದು.

45 : (209)

ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಎತ್ತಿನಹೊಳೆಯಿಂದ ಕೋಲಾರ ಜಿಲ್ಲೆಗೆ ನೀರು ಒದಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಎತ್ತಿನಹೊಳೆಯಿಂದ ನೀರನ್ನು ತುಂಬಿಸಲಾಗುತ್ತಿರುವ ಜಿಲ್ಲಾ, ತಾಲ್ಲೂಕು ಹಾಗೂ ಕೆರೆಗಳಾವುವು ?

ಇ) ಈ ಕಾಮಗಾರಿಗಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಯಾವಾಗ ಪ್ರಾರಂಭ ಮಾಡಲಾಗುವುದು. ಹಾಗೂ ಎಷ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಬಸವರಾಜ ಬೋಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ಬರಪೀಡಿತ ಪ್ರದೇಶಗಳಾದ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಮತ್ತು ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸುಧಾರಣೆಗಾಗಿ ಎತ್ತಿನಹೊಳೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ನಿರ್ಧರಿಸಿದೆ. ಈ ಸಂಬಂಧ ಸದರಿ ಯೋಜನೆಗೆ ರೂ.8323.50 ಕೋಟಿಗಳ ಆಡಳಿತ್ಮಾಕ ಅನುಮೋದನೆಯನ್ನು ಈಗಾಗಲೇ ನೀಡಲಾಗಿದ್ದು, ಮೊದಲನೇ ಹಂತದಲ್ಲಿ ಹರವನಹಳ್ಳಿ ವಿತರಣಾ ಕೇಂದ್ರದವರೆಗಿನ ರೂ.3269.50 ಕೋಟಿ ಮೊತ್ತದ ಏತ ಕಾಮಗಾರಿಗಳನ್ನು EPC/Turnkey Tender ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಮತ್ತು ಈ ಕುರಿತು ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿ ಜೊತೆ ಸಮಾಲೋಚನೆಯೊಂದಿಗೆ ಅನುಕೂಲಕರ (Suitable) ಪ್ಯಾಕೇಜುಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ.

ಆ) ಎತ್ತಿನಹೊಳೆ ಯೋಜನೆಯಿಂದ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಂಗಳೂರು ಗ್ರಾಮೀಣ, ರಾಮನಗರ ಇತ್ಯಾದಿ ಜಿಲ್ಲೆಗಳ ಕುಡಿಯುವ ನೀರಿನ ಸುಧಾರಣೆಗೆ ಪ್ರಸ್ತಾಪಿಸಲಾಗಿದ್ದು, ಈ ಬಗ್ಗೆ ವಿವರವಾದ ಯೋಜನಾ ವರದಿಯು ತಯಾರಿಕೆ ಹಂತದಲ್ಲಿರುತ್ತದೆ. ಈ ಯೋಜನಾ

ವರದಿಯನ್ನು ಅಂತಿಮಗೊಳಿಸಿದ ನಂತರ ಈ ಕುರಿತಂತೆ ನಿಖರವಾದ ಹಾಗು ವಿವರವಾದ ಮಾಹಿತಿಯು ಲಭ್ಯವಾಗಲಿದೆ.

ಇ) ಎತ್ತಿನಹೊಳೆ ಯೋಜನೆಗೆ 2012–13ನೇ ಸಾಲಿಗೆ ರೂ.500.00 ಲಕ್ಷಗಳ ಅನುದಾನವನ್ನು ಒದಗಿಸಲಾಗುತ್ತದೆ. ಸದರಿ ಯೋಜನೆಗೆ ಸಂಬಂಧಿಸಿದಂತೆ ಮೊದಲನೇ ಹಂತದ ಏತ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಮೊದಲ ಹಂತದ ಕಾಮಾಗಾರಿಗಳ ಟೆಂಡರ್ ಪ್ರಕ್ರಿಯೆ ಜರಿಯಲ್ಲಿರುತ್ತದೆ. ಮೊದಲ ಹಂತದ ಕಾಮಗಾರಿಗಳನ್ನು 36 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಎತ್ತಿನ ಹೊಳೆ ಯೋಜನೆ ಗೊತ್ತು ಗುರಿಯಿಲ್ಲದಿರುವ ಯೋಜನೆ ಎಂಬ ರೀತಿಯಲ್ಲಿ ಇಲ್ಲಿ ಉತ್ತರವಿದೆ. ಈ ಮಾತನ್ನು ಹೇಳುವ ಉದ್ದೇಶವೇನೆಂದರೆ, ಯಾವ್ಯಾವ ಕೆರೆಗಳಿಗೆ ಯಾವ್ಯಾವ ತಾಲ್ಲೂಕುಗಳಿಗೆ ಎಷ್ಟು ನೀರನ್ನು ಹರಿಸುತ್ತೀರೆಂದು ಕೇಳಿದ್ದೇವೆ. ನಾವು ಇನ್ನೂ ನಿಖರವಾಗಿ ಅದರ ಬಗ್ಗೆ ಮಾಹಿತಿಯನ್ನು ತೆಗೆದುಕೊಂಡಿಲ್ಲ. ಅದರ ಬಗ್ಗೆ ಯೋಜನಾ ವರದಿಯು ತಯಾರಿಇಜ ಹಂತದಲ್ಲಿರುತ್ತದೆಂದು ಹೇಳಿದ್ದೀರಿ. ಎಷ್ಟು ಟಿಎಂಸಿ ನೀರನ್ನು lift ಮಾಡುತ್ತೇವೆ, ಯಾವ್ಯಾವ ಕೆರೆಗೆ, ಯಾವ್ಯಾವ ತಾಲ್ಲೂಕಿಗೆ, ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಟಿಎಂಸಿ ನೀರನ್ನು ಹರಿಸುತ್ತೇವೆಂಬ ಬಗ್ಗೆ ಮೊದಲೇ ತೀರ್ಮಾನ ಮಾಡಬೇಕು. ಆದರೆ ನೀವು 24 ಟಿಎಂಸಿ ನೀರನ್ನು lift ಮಾಡುತ್ತೇವೆಂದು ಹೇಳಿದ್ದೀರಿ. ನನಗೆ ಬಂದಿರುವ ಮಾಹಿತಿ ಪ್ರಕಾರ ಅಲ್ಲಿ ನೀವು lift ಮಾಡುವುದಕ್ಕಾಗುವುದೇ 8–10 ಟಿಎಂಸಿ ನೀರು. ಪ್ರತಿನಿತ್ಯ ಎಂಟು ಗಂಟೆಗಳ ಕಾಲ ನಿರಂತರವಾಗಿ ಎಂಟು ಪಂಪ್‌ಗಳನ್ನು ಇಟ್ಟು lift ಮಾಡಿದರೆ ಸುಮಾರು 3000 ಕ್ಯೂಸೆಕ್ಸ್ ನೀರನ್ನು lift ಮಾಡಬಹುದೆಂಬ ಮಾಹಿತಿ ನನಗಿದೆ. ಅದರ ಜೊತೆಯಲ್ಲಿ Central Water Commission ರವರು ಕೂಡ ನಿಮ್ಮ ಇಲಾಖೆಗೆ ಒಂದು ಪತ್ರ ಬರೆದಿರಬಹುದೆಂದು ಕಾಣುತ್ತದೆ. ಈ ಹಿಂದೆ ಒಂದು ಸಭೆಯಲ್ಲಿ ಅವರನ್ನು ಕರೆಸಿದ್ದರೆಂಬ ಮಾಹಿತಿ ನನಗಿದೆ. ಅವರ ಪತ್ರದ ಅಂಶವೇನೆಂದು ದಯಮಾಡಿ ಈ ಸಭೆಗೆ ತಾವು ತಿಳಿಸಬೇಕು. ಜೊತೆಗೆ ಯಾವ್ಯಾವ ತಾಲ್ಲೂಕಿಗೆ, ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಟಿಎಂಸಿ ನೀರನ್ನು ಹರಿಸುತ್ತೀರೆಂಬ

ಬಗ್ಗೆ ಮಾಹಿತಿಯಿಲ್ಲದೇ ಸುಮ್ಮನೆ ಈ ಯೋಜನೆ ಮಾಡಿದರೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಸ್ಪಷ್ಟವಾದ ಉತ್ತರವನ್ನು ನಾನು ತಮ್ಮಿಂದ ನಿರೀಕ್ಷೆ ಮಾಡುತ್ತೇನೆ.

ಶ್ರೀ ಬಸವರಾಜು ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಎತ್ತಿನ ಹೊಳೆ ಯೋಜನೆ ಯೋಜನಾಬದ್ಧವಾಗಿಯೇ ಇದೆ ಮತ್ತು ಒಂದು ಗುರಿಯಿದೆ ಎಲ್ಲವೂ ಇದೆ. ಇದರಲ್ಲಿ ಆ ಭಾಗದ ಜನರಿಗೆ ಕೂಡಲೇ ಪರಿಹಾರವನ್ನು ಕೊಡಬೇಕೆಂಬ ದೃಷ್ಟಿಯಿಂದ ಸಮಗ್ರವಾಗಿರುವ ಶಾಶ್ವತವಾದ ನೀರನ್ನು ಪಶ್ಚಿಮ ವಾಹಿನಿಗೆ ಕೊಡುವ ಸಂಬಂಧ ಈಗಾಗಲೇ DPR ಆಗಿ ನಡೆಯುತ್ತಿದೆ. ಅದರ ಮಧ್ಯೆ short term measures ಆಗಿ ಯಾವುದೇ environmental problem ಆಗದ ರೀತಿಯಲ್ಲಿ ಮಾಡುವ ಸಲುವಾಗಿ ಎತ್ತಿನ ಹೊಳೆ ಯೋಜನೆಯನ್ನು ಎತ್ತಿನ ಹೊಳೆಯ ಕೊನಲೂರು ಪ್ರದೇಶದಿಂದ 25 ಟಿಎಂಸಿ ನೀರನ್ನು ಎತ್ತುವುದು ಬಹಳ ಸ್ಪಷ್ಟವಾಗಿದೆ. 25 ಟಿಎಂಸಿ ನೀರನ್ನು ಎತ್ತುವುದಕ್ಕೆ ಸಾಧ್ಯತೆಯಿದೆ. Indian Institute of Science ನ Professors and Hydrology experts ಎರಡು ಬಾರಿ ವರದಿಯನ್ನು ಕೊಟ್ಟಿ ನಂತರ ಆ ತೀರ್ಮಾನ ಮಾಡಿದ್ದೇವೆ ಮತ್ತು ಸಮಯವನ್ನು ಉಳಿಸುವ ಸಲುವಾಗಿ ಎರಡು ಹಂತದಲ್ಲಿ ಮಾಡಿದ್ದೇವೆ. ಒಂದು life ಏನು ಮಾಡುತ್ತಿದ್ದೇವೆ, ಅದಕ್ಕೆ ಈಗಗಲೇ DPR ಆಗಿ parameters fix ಆಗಿ ಟೆಂಡರ್ ಪ್ರಕ್ರಿಯೆಯಾಗುತ್ತಿದೆ. ಇನ್ನೂ ಅದರ distribution point ನಲ್ಲಿ ಈಗಾಗಲೇ Lidar survey ಕೂಡ ಮುಗಿಯುವ ಹಂತದಲ್ಲಿದೆ. 15–20 ದಿವಸಗಳಲ್ಲಿಯೇ ಯಾವ್ಯಾವ levels ನಲ್ಲಿ ಯಾವ್ಯಾವ ಕೆರೆಗಳು mini lift ಮಾಡುವಂತಹ ಅವಶ್ಯಕತೆಯಿದೆ. ಎಂಬ ಬಗ್ಗೆ ಸಂಪೂರ್ಣವಾದ ವಿವರಣೆಯನ್ನು ಜಿಲ್ಲಾವಾರು, ತಾಲ್ಲೂಕುವಾರು ಎಲ್ಲಾ ಮಾನ್ಯ ಶಾಸಕರುಗಳಿಗೆ ಖಂಡಿತವಾಗಿ ಕೊಡುತ್ತೇನೆ. ಅದಾದ ತಕ್ಷಣ ಆ ಕೆಲಸವನ್ನೂ ಕೂಡ ಕೈಗೆತ್ತಿಕೊಳ್ಳುತ್ತೇವೆ. ಇದರ ಜೊತೆಗೆ ಇನ್ನೊಂದು ವಿಚಾರವನ್ನು ಸದನಕ್ಕೆ ತಿಳಿಸಬಯಸುತ್ತೇನೆ. ಕೇಂದ್ರದ CWC ರವರು ಮೊನ್ನೆ ಸಭೆಯಲ್ಲಿ environment clearance ಕೂಡ ಮಾಡಿದ್ದಾರೆ. ಎತ್ತಿನಹೊಳೆ project ಕುಡಿಯುವ ನೀರಿನ project ಆಗಿರುವುದರಿಂದ ಇದನ್ನು exempt ಮಾಡುತ್ತೇವೆಂದು ಹೇಳಿ

proceedings ಮಾಡಿದ್ದಾರೆ. ಆದೇಶವಿನ್ನೂ ಹೊರಗೆ ಬರಬೇಕಾಗಿದೆ, ತಮಿಳುನಾಡಿನ ಒಂದು project ಇದರೊಂದಿಗೆ ಸೇರಿಕೊಂಡಿರುವುದರಿಂದ 15–20 ದಿವಸಗಳೊಳಗೆ ಇವೆರಡನ್ನೂ ಸೇರಿಸಿ ಮಾಡುತ್ತರೆ. ಇದೊಂದು ಬಹಳ ದೊಡ್ಡ ಯೋಜನೆಯಾಗಿದೆ. ಪಶ್ಚಿಮಮುಖಿಯಲ್ಲಿ ಬರುವ ಮೊದಲ ಸಮಸ್ಯೆಯೆಂದರೆ environment. That is the biggest challenge. ಅದರಿಂದ ಪಾರಾದರೆ ಮುಂದೆ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯ. ಇಲ್ಲವಾದರೆ ಏನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ಇಲಾಖೆ project ಕಳುಹಿಸಿ ಕಳೆದ ಆರು ತಿಂಗಳಿಂದ ಅವರ ಜೊತೆಗೆ ಮಾತನಾಡಿ, ನಮ್ಮ ಪ್ರಧಾನ ಕಾರ್ಯದರ್ಶಿಯವರು ಸಭೆಯಲ್ಲಿ ವಾದವನ್ನು ಮಾಡಿ convince ಮಾಡಿದ್ದಾರೆ. proceedings ನಲ್ಲಿ ಒಪ್ಪಿಗೆ ಕೊಟ್ಟಿದ್ದಾರೆ. Environment clearance ಬಂದ ತಕ್ಷಣ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ. ಇದರ ಜೊತೆಗೆ ನೀರು ಕಡಿಮೆಯಾಗುತ್ತಿದೆಯೆಂದು ಏನು ತಮ್ಮ ಆದ್ಯತೆಯಿದೆ ಅದಕ್ಕೆ common grid canals ಕೂಡ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರಲ್ಲಿ ಪರಮಶಿವಯ್ಯನವರ ವರದಿ ಆಧಾರಿತ ಇನ್ನಿತರ ಯೋಜನೆಗಳನ್ನೂ ಕೂಡ ಒಂದೇ canal ನಲ್ಲಿ ತರಬೇಕೆಂಬ ಉದ್ದೇಶವಿದೆ. ಅಂದರೆ ಪಶ್ಚಿಮಮುಖಿಯಿಂದ ನೇರವಾಗಿ ನಮಗೆ ಎಲ್ಲಿ storage point ದೇವದುರ್ಗ ಇದೆ ಅಲ್ಲಿಂದ ಹೆಚ್ಚಿಗೆ ನೀರನ್ನು ತರುವ ಸಲುವಾಗಿ ಅಲ್ಲಿಂದ ಕೋಲಾರ, ಚಿಕ್ಕಬಳ್ಳಾಪುರ ಒಂದು ಕಡೆ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ತುಮಕೂರು ಈ ರೀತಿಯ branch out ಮಾಡಿ ಮಾಡುವುದಕ್ಕೆ ಈಗಾಗಲೇ ಯೋಜನೆಗಳನ್ನು ಸಿದ್ಧಪಡಿಸಿದ್ದೇವೆ. ಕೋಲಾರ, ಚಿಕ್ಕಬಳ್ಳಾಪುರ ಮತ್ತು ಹೋಬಳಿ, ಗ್ರಾಮಾಂತರ ಮತ್ತು ರಾಮನಗರದ ಕೆಲವು ತಾಲ್ಲೂಕುಗಳ ಎಲ್ಲಾ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವುದಕ್ಕೆ ಸರ್ವೆ ಮಾಡಿಕೊಡುವಂತೆ ಆದೇಶವಾಗಿದೆ. ಸರ್ವೆ ಕಾರ್ಯ ಅಂತಿಮ ಹಂತದಲ್ಲಿದ್ದು, ಅದು ಬಂದ ನಂತರ ಎಲ್ಲಾ ಮಾಹಿತಿಯನ್ನು ನಾನು ಲಿಖಿತವಾಗಿ ತಮ್ಮ ಮುಖಾಂತರ ಕೊಡುತ್ತೇನೆ. ಮೊದಲ ಹಂತದಲ್ಲಿ ರಾಮನಗರ ಇರಲಿಲ್ಲ ಇದು ಶ್ರೀ ಹೆಚ್.ಸಿ.ಬಾಲಕೃಷ್ಣರವರಿಗೂ ಕೂಡ ಗೊತ್ತಿದೆ. ಅದನ್ನು 25 ಟಿಎಂಸಿ ಮಾಡಬಹುದೆಂದು ತೀರ್ಮಾನ ಮಾಡಿದ ನಂತರ ಸೇರಿಸಿಕೊಂಡಿದ್ದೇವೆ. ಆ ರೀತಿ ಅಲ್ಲಿ ಯಾವ್ಯಾವ ತಾಲ್ಲೂಕುಗಳಿಗೆ

ಎಷ್ಟೆಷ್ಟು ನೀರನ್ನು ಕೊಡಬೇಕೋ, ಅದನ್ನು ಖಂಡಿತವಾಗಿ ಕೊಡುತ್ತೇವೆ. ಇದರ ಬಗ್ಗೆ ವಿವರವಾದ ಮಾಹಿತಿಯನ್ನು ಮಾನ್ಯ ಶಾಸಕರಿಗಷ್ಟೇ ಅಲ್ಲ, ಇಡೀ ಸದನಕ್ಕೆ ಕೊಡುವುದಕ್ಕೆ ಇಚ್ಚೆ ಪಡುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್.ಸುರೇಶ್ ಕುಮಾರ್ (ಮಾನ್ಯ ಕಾನೂನು, ಮಾನದ ಹಕ್ಕು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ, ಬೆಂಗಳೂರು ಜಲಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ:11–2–2013ರ 3ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 72 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ–1)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ ಶೂನ್ಯವೇಳೆ–ಯಲ್ಲಿ ಬಹಳ ದಿವಸಗಳಿಂದ pending ಇದೆ.

ಅಧ್ಯಕ್ಷರು: ಈಗ ಕಾವೇರಿ ವಿಷಯವನ್ನು ಪ್ರಸ್ತಾಪಿಸುತ್ತೇನೆ.

(ಗೊಂದಲ)

ಶ್ರೀ ಆರ್.ರೋಷನ್ ಬೇಗ್ : ಇಡೀ ರಾಜ್ಯದಲ್ಲಿ ವೈದ್ಯರು strike ಮಾಡುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ರೋಗಿಗಳು ಸಾಯುತ್ತಿದ್ದಾರೆ. ಸರ್ಕಾರ ಹೇಳಿಕೆ ಕೊಡಲಿ. ಯಾವ ಸರ್ಕಾರಿ ಆಸ್ಪತ್ರೆಯಲ್ಲೂ ಕೂಡ function ಆಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಯಾವುದಾದರೂ ಒಂದು ವಿಷಯವನ್ನು ತೆಗೆದುಕೊ–ಳ್ಳೋಣ. ಎಲ್ಲರೂ ಹೀಗೆ ಎದ್ದು ನಿಂತರೆ ಹೇಗೆ?

(ಗೊಂದಲ)

ಶ್ರೀ ಯು.ಟಿ.ಖಾದರ್ : ವೈದ್ಯರ strike ನಿಂದಾಗಿ ಒಬ್ಬ ರೋಗಿಯ ಜೀವ ಹೋಗಿದೆ. ಇವತ್ತು ಮಾನ್ಯ ಸಚಿವರು ರಾಜಿನಾಮೆ ಕೊಡಬೇಕು.